ದಿನಾಂಕಃ 26-07-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ಜಿ.ಸಿ. ವಕೀಲರಿಂದಃ**

ದಾವ ಸ್ವತ್ತಿನ ಉತ್ತರಕ್ಕೆ ಮರುಳಸಿದ್ದಮ್ಮರವರ ಹಿತ್ತಲು ಇದೆ. ದಕ್ಷಿಣಕ್ಕೆ ನಮ್ಮ ಖಾಲಿ ಸ್ವತ್ತು ಇದೆ. ದಕ್ಷಿಣ ದಿಕ್ಕಿನಲ್ಲಿ ಇರುವ ಖಾಲಿ ಜಾಗ 50 x 38 ಇದೆ. ದಾವ ಸ್ವತ್ತಿನ ಮನೆಯು 50 x 115 ಇದೆ. ಸದರಿ ಮನೆಯ ದಕ್ಷಿಣ ದಿಕ್ಕಿಗೆ ಮೇಲೆ ಹೇಳಿದ ಖಾಲಿ ಜಾಗ 50 x 38 ಇದೆ. ದಾವ ಸ್ವತ್ತಿನಲ್ಲಿ ಪೂರ್ವ-ಪಶ್ಚಿಮ 50 ಅಡಿ ಮತ್ತು ಉತ್ತರ-ದಕ್ಷಿಣ 38 ಅಡಿ ಇದೆ ಎಂದು ನಮೂದು ಮಾಡಿದ್ದೇನೆ ಎಂದರೆ ಸರಿ. ದಾವ ಸ್ವತ್ತಿನ ಪೂರ್ವಕ್ಕೆ ಗಂಗಮ್ಮರವರ ಮನೆ ಇದೆ. ದಾವ ಸ್ವತ್ತಿನ ಪಶ್ಚಿಮಕ್ಕೆ ಗಲ್ಲಿ ಇದೆ. ದಾವ ಸ್ವತ್ತು ಪಿತ್ರಾರ್ಜಿತ ಆಸ್ತಿ ಎಂದು ನಮೂದು ಇದೆ ಎಂದರೆ ಸರಿ. ಶಾರದಮ್ಮ ನನ್ನ ತಾಯಿ. ನನ್ನ ತಾಯಿ ಶಾರದಮ್ಮರವರಿಗೆ ಸ್ವತ್ತು ಹೇಗೆ ಬಂತು ಎಂದು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ.

ನನ್ನ ತಾತನ ಹೆಸರಿನಲ್ಲಿ ಇದ್ದ ಸ್ವತ್ತು ವಿಭಾಗದ ಮೂಲಕ ನನ್ನ ತಾಯಿಯ ಹೆಸರಿಗೆ ಬಂದಿದೆ. ಸದರಿ ವಿಭಾಗ ಪತ್ರವನ್ನು ಹಾಜರುಪಡಿಸಬಲ್ಲೆ. ಪ್ರತಿವಾದಿಯವರು ದಿನಾಂಕ 28.03.2020 ಮತ್ತು 29.06.2020 ರಂದು ದಾವ ಸ್ವತ್ತಿಗೆ ಅತಿಕ್ರಮಣ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಒತ್ತುವರಿ ಮಾಡಲು ಪ್ರಯತ್ನಿಸಿದ್ದಕ್ಕೆ ನಾವು ಠಾಣೆಗೆ ದೂರು ನೀಡಿರುತ್ತೇವೆ. ಪ್ರತಿವಾದಿ ದಾವ ಸ್ವತ್ತನ್ನು ಒತ್ತುವರಿ ಮಾಡಲು ಪ್ರಯತ್ನಿಸಿಲ್ಲ ಎಂದರೆ ಸರಿಯಲ್ಲ. ಒತ್ತುವರಿ ಆಗಿದೆ ಎಂದು ತೋರಿಸಲು ಛಾಯಾಚಿತ್ರ ಹಾಜರುಪಡಿಸಿರುತ್ತೇನೆ. ಪ್ರತಿವಾದಿಯವರು 30 ಅಡಿ ಒತ್ತುವರಿ ಮಾಡಿರುತ್ತಾರೆ.

ನಮ್ಮ ಮತ್ತು ಪ್ರತಿವಾದಿಯವರ ಸ್ವತ್ತಿನ ನಡುವೆ 50 ಅಡಿಯ ಅಂತರ ಇದೆ. ನಿಪಿ.11 ರಲ್ಲಿ ಕಾಣುವಂತೆ ಪ್ರತಿವಾದಿಯವರು ತನ್ನ ಸ್ವತ್ತಿನಲ್ಲಿ ಪಾಯ ತೆಗೆಯುತ್ತಿದ್ದರು ಮತ್ತು ದಾವ ಸ್ವತ್ತಿನಲ್ಲಿ ಪಾಯ ತೆಗೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಜಾಗದಲ್ಲಿ ನಾವು ಇದ್ದೇವೆ ಮತ್ತು ಪ್ರತಿವಾದಿಯವರು ಅವರ ಜಾಗದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಿಪಿ.11 ರಲ್ಲಿ ಕಾಣುವಂತೆ ಯಾವುದೇ ಒತ್ತುವರಿ ಪ್ರತಿವಾದಿ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯವರು ತಮ್ಮ ಮನೆಯಿಂದ 50 ಅಡಿ ಒತ್ತುವರಿ ಮಾಡಿರುತ್ತಾರೆ.

ಪ್ರತಿವಾದಿಯವರು ನೂತನ ಮನೆ ನಿರ್ಮಿಸಬಾರದು ಎಂಬ ಉದ್ದೇಶದಿಂದ ಈ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರ ಹಳೆ ಮನೆ ಕೆಡವಿ ನೂತನ ಮನೆ ನಿರ್ಮಿಸದರೆ ನಮ್ಮ ತಕರಾರು ಇರುವುದಿಲ್ಲ, ಆದರೆ ಅವರು ನಮ್ಮ ಜಾಗದಲ್ಲಿ ಅಡಿಪಾಯ ಹಾಕಿ ಮನೆ ನಿರ್ಮಿಸಲು ಬಂದರು. ಆದ್ದರಿಂದ ಅವರ ವಿರುದ್ಧ ಪ್ರಸ್ತುತ ದಾವೆ ಹೂಡಿದ್ದೇನೆ ಮತ್ತು ಅವರ ಜಾಗದಲ್ಲಿ ಬೇಕಾದರೆ ಮನೆ ಕಟ್ಟಿಕೊಳ್ಳಲಿ ಎಂದು ನುಡಿಯುತ್ತಾರೆ. ನಿಪಿ.11 ರಲ್ಲಿ ಪಾಯ ತೆಗೆದಿರುವ ಜಾಗ ನಮ್ಮ ಮನೆಯ ಎದುರು ಇರುವ ಸ್ವತ್ತು ಎಂದರೆ ಸರಿ. ಪ್ರತಿವಾದಿಯವರಿಗೆ ತೊಂದರೆ ಕೊಡಲು ಸುಳ್ಳು ದಾವೆ

ಹೂಡಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮತ್ತು ಪ್ರತಿವಾದಿಯ ಸ್ವತ್ತನ್ನು ಅಳತೆ ಮಾಡಿಸಲು ತೊಂದರೆ ಇರುವುದಿಲ್ಲ. ನನ್ನ ಅನುಮತಿ ಇದೆ.

ಮುಂದುವರಿದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ಮುಂದೂಡಲಾಯಿತು.

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.